Sri S. SRINIVASA IYENGAR.—I seek leave to withdraw my cut motion.

The cut motion was, by leave, withdrawn.

Construction of Tank near Manchiladore.

ಶ್ರೀ ಬಿ. ಸಿ. ನಂಜುಂಡಯ್ಯ (ಕೋರ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಿದೆ :—

"The demand under the head '19. Construction of Irrigation, Navigation, Embankment and Drainage Works' for Rs. 16,89,000 be reduced by Rs. 100 (to raise a debate on the immediate necessity of constructing a tank near Manchiladore in Hagalvadi Hobli, Gubbi Taluk)."

ಈ ಹಾಗಲವಾಡಿ ಹೋಬಳಿ ಯಾವಾಗಲೂ ಮಳೆ ಸಾಕಾದಷ್ಟು ಬಾರದೆ ಕ್ಷಾಮಕ್ಕೆ ಸಿಕ್ಕಿರುವ ಒಂದು ಹೋಬಳಿಯಾಗಿದೆ. ನಾನು ಹೇಳುವ ನ್ಯೂಳ ಫಾರೆಸ್ಟ್ ಪ್ರದೇಶ. ಅಲ್ಲಿ ಆ ಊರಿನ 8 ಮೈಲಿ ನುತ್ತ ಎಲ್ಲೂ ಯಾವ ಕೆರೆಯೂ ಇಲ್ಲ. ಈ 20ನೆಯ ಶತಮಾನದಲ್ಲೂ ಬಿತ್ತದ ಪೈರು ಹೇಗಿದೆಯೆಂದು ಕಾಣದಿರುವ ರೈತರು ಆ ಪ್ರದೇಶದಲ್ಲದ್ದಾರೆಂದು ವಿಷಾದದಿಂದ ಹೇಳಬೇಕಾಗಿದೆ. ಅಂಥ ಕಡೆ ಒಂದು ಕೆರೆ ಆಗಬೇಕೆಂದು ಎರಡು ವರ್ಷಗಳಿಂದ ಪಬ್ಲಿಕ್ ವರ್ಕ್ಸ್ ಇಲಾಖೆಗೂ ಹೇಳಿ ಬಹಳವಾಗಿ ಪ್ರಯತ್ನಪಡುತ್ತಿದ್ದೇನೆ. ಅಲ್ಲಿ ನೀರಿನ ಆಸರೆಯಿದೆ; ಮನಸ್ಸಿದ್ದರೆ ನಿಜವಾಗಿಯೂ ಕೆರೆಯಾಗುತ್ತದೆ. ಎರಡು ವರ್ಷಗಳಿಂದ ಎಸ್ಟಿಮೇಟ್ ಮಾಡಬೇಕೆಂದು ಇಲಾಖೆಗೆ ಹೇಳಿದರೂ ಆಗಿರಲಲ್ಲ. ಈ ಸಭೆಯಲ್ಲಿ ಪ್ರಶ್ನೆ ಬಂದ ಮೇಲೆ ಎಸ್ಟಿಮೇಟ್ ಆಗಿದೆ. ಆದರೆ 4 ಕಡೆ ಕೆರೆಯಾಗುತ್ತದೆಂದು ಒಂದಕ್ಕೊಂದಕ್ಕೆ ಸಂಬಂಧವಿಲ್ಲದಂತೆ ಎಸ್ಟಿಮೇಟ್ ಮಾಡಿದ್ದಾರೆಂದು ಗೊತ್ತಾಗಿದೆ. ಎರಡು ಕೆರೆಗಳ ಅಂದಾಜುಗಳಲ್ಲಿ ಒಂದು ಸಾವಿರ ರೂಪಾಯಿ ಕಡಮೆ ಬರುವ ಪರಿಸ್ಥಿತಿಯಿದೆ. 2 ಕೆರೆಗಳಿಗೆ ಬದಲಾಗಿ ಒಂದೇ ಕೆರೆ ಮಾಡಿದರೆ ಉಪಕಾರವಾಗುತ್ತದೆ. ಹೆಚ್ಚಾಗಿ ಮಾಡಲು ಸಾಧ್ಯವಿಲ್ಲ. ಅಲ್ಲಿ ಕೆರೆ ಕಟ್ಟಿದರೆ ನುತ್ತಲೂ ಇರುವ ಪ್ರದೇಶದಲ್ಲಿರುವ ಬಾವಿಗಳಿಗೆ ನೀರು ಬಂದು ಕುಡಿಯುವ ಪೈರಿಕ್ಕೆ ಸಿಕ್ಕುತ್ತದೆ. ಅಲ್ಲಿ ಮಾರ್ಚ್ ತಿಂಗಳಿನಿಂದ ಏಪ್ರಿಲ್‌ವರೆಗೂ ಕುಡಿಯಲು ನೀರಿಲ್ಲದೆ 4-5 ಮೈಲಿಗಳಿಂದ ನೀರನ್ನು ತರಬೇಕಾಗುತ್ತದೆ. ಈ ಕಷ್ಟವನ್ನು ನಿವಾರಣೆ ಮಾಡಬೇಕು.

Mr. SPEAKER.—Cut motion moved:

"That the demand be reduced by Rs. 100."

ಶ್ರೀ ಕಡಿದಾಳ್ ಮಂಜಪ್ಪ.—ಸ್ವಾಮಿ, ಮಂಚಲ ದೊರೆ ಹತ್ತಿರ ಒಂದು ಕೆರೆ ಕಟ್ಟುವ ಬಗ್ಗೆ ಎಸ್ಟಿಮೇಟ್ ತಯಾರಾಗಿ ಅದು ಚೀಫ್ ಇಂಜನಿಯರ ಆಫೀಸಿನಲ್ಲಿ ಈಗ ಪರಿಶೀಲನೆಯಲ್ಲಿದೆ. ಅದು ಬಂದ ನಂತರ ಸೂಕ್ತಕ್ರಮ ಕೈಕೊಳ್ಳುತ್ತೇವೆ. ಆದ್ದರಿಂದ ಮಾನ್ಯ ನದನ್ಯರು ಅವರ ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ.

Sri B. C. NANJUNDAIAH.—I seek leave to withdraw my cut motion.

The cut motion was, by leave, withdrawn.

Mr. SPEAKER.—The question is:

"That a sum not exceeding Rs. 16,89,000 be granted to the Government to defray the charges which will come in course of payment during the year ending 31st day of March 1955, in respect of 'Construction of Irrigation, Navigation, Embankment and Drainage Works'."

The motion was adopted.

DEMAND No. 12—GENERAL ADMINISTRATION STATE LEGISLATURE AND ELECTION CHARGES.

25. GENERAL ADMINISTRATION (B. PARLIAMENT AND THE STATE LEGISLATURE AND C. ELECTION FOR LEGISLATURE.)

Mr. SPEAKER.—Motion moved:

"That a sum not exceeding Rs. 12,75,700 be granted to the Government to defray the charges which will come in course of payment during the year ending 31st day of March 1955, in respect of 'General Administration (State Legislature and Election Charges.)'"

The first cut motion is in the name of Sri Srinivasa Iyengar. So far as this cut motion is concerned, it deals mostly with the Legislature. There is the Law Minister and the Chairman in the other House; so, it will not be all right to discuss it here. It is better that the Hon'ble Member leaves it.

Sri S. SRINIVASA IYENGAR—Very well, Sir.

Necessity to abolish Legislative Council.

ಶ್ರೀ ಬಿ. ವಿ. ನಾರಾಯಣರೆಡ್ಡಿ (ಬಾಗೇಪಲ್ಲಿ—ಗುಡಿಬಂಡೆ).—ಸ್ವಾಮಿ, ನನ್ನ ಖೋತಾ ಸೂಚನೆ ಈ ರೀತಿಯಾಗಿದೆ.—

"The demand under the head "25. General Administration (B.